


### ಮಾಹಿತಿಪೂರ್ಣ ಲೇಖನ

ಆಗಸ್ಟ್ 2ರ 'ಸುಧಾ' ಸಂಚಿಕೆಯ ಟಿ.ಎಸ್.ಗೋಪಾಲರ ಮುಖಪುಟ ಲೇಖನ 'ಹಸಿರು ಇಂಧನ' ನಮ್ಮ ನಡುವೆಯೇ ಇರುವ ಜೈವಿಕ ಇಂಧನಗಳ ಬಗೆಗೆ ಸಾಕಷ್ಟು ಮಾಹಿತಿ ನೀಡಿದೆ.

-ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ
ವೈ.ಯಂ.ಚಂದ್ರಶೇಖರ್, ಸಿದ್ದಾಪುರ

### ಅರ್ಥಪೂರ್ಣ ವಿಚಾರ

'ಊಟ ನಿಮ್ಮಿಚ್ಛೆ' ಅರ್ಥಪೂರ್ಣ ವಿಚಾರ ಲಹರಿ. ಎಂ.ಎಸ್. ರಘುನಾಥ್ ಪ್ರವಾಸ ಲೇಖನ ಚೆನ್ನಾಗಿತ್ತು.

-ಎಂ.ಎಲ್. ಲಕ್ಷ್ಮಣ್ ರಾವ್, ದಾವಣಗೆರೆ

### ಕಣ್ತುಂಬಿಕೊಂಡ ಸೌಭಾಗ್ಯ

'ಏಕಶಿಲೆಯಲ್ಲಿ ಅರಳಿದ ಕಲೆ'ಯನ್ನು ಕಣ್ತುಂಬ ನೋಡುವ ಸೌಭಾಗ್ಯವನ್ನು 'ಸುಧಾ' ಪತ್ರಿಕೆ ಕಲ್ಪಿಸಿತು.

-ಎಚ್.ಆರ್.ದೇಸಾಯಿ, ರಾಯಚೂರು

### ರಾಜೇಶ್ ಖನ್ನಾಗೆ ನುಡಿ ನಮನ

ಹಿಂದಿ ಚಿತ್ರರಂಗದ ತಾರೆ 'ಸಫ಼ೋಂ ಕಾ ರಾಜಾ' ರಾಜೇಶ್ ಖನ್ನಾ ಅವರಿಗೆ ಬಿ.ಎಂ.ಹನೀಫ್ ಸಲ್ಲಿಸಿದ ನುಡಿನಮನ ಚೆನ್ನಾಗಿತ್ತು.

-ಎಸ್.ಎಚ್.ದಾವಣಗೇರಿ, ಕೋಣನಕೇರಿ

### ಅದೃಷ್ಟ! ದುರಾದೃಷ್ಟ!

ಎಪ್ಪತ್ತರ ದಶಕದಲ್ಲಿ ಭಾರತದ ಯುವ ಜನತೆಯನ್ನು ಮುಖ್ಯವಾಗಿ ಯುವತಿಯರನ್ನು ಸೂಜಿಗಲ್ಲಿನಂತೆ ಆಕರ್ಷಿಸಿದ ನಟ ರಾಜೇಶ್ ಖನ್ನಾ, ಹಿಟ್ ಚಿತ್ರಗಳಲ್ಲಿ ನಟಿಸಿದ್ದು ಆತನ 'ಅದೃಷ್ಟ.'

ಕೋಟಿ ಕೋಟಿ ಬೆಲೆಬಾಳುವ ಆಶೀರ್ವಾದ್ ಎಂಬ ಅರಮನೆಯಲ್ಲಿ ಗೆಳತಿಯೊಬ್ಬಳೊಡನೆ ಕೊನೆಯ ದಿನಗಳನ್ನು ಕಳೆಯಬೇಕಾದುದು ಆತನ 'ದುರಾದೃಷ್ಟ.'

-ಡಾ.ಕೆ.ಕೆ. ಜಯಚಂದ್ರ ಗುಪ್ತ, ಹಾಸನ

### ಸರಿ- ತಪ್ಪು

'ಸಫ಼ೋಂ ಕೆ ರಾಜಾ' ತಪ್ಪು, 'ಸಫ಼ೋಂ ಕಾ ರಾಜಾ' ಸರಿ. 'ಹಾತಿ ಮೇರೆ ಸಾಥಿ' ಬಿಡುಗಡೆಯಾಗಿದ್ದು 1871ರಲ್ಲಿ ಅಲ್ಲ, 1971ರಲ್ಲಿ.

ದಿನೇಶ್ ಗುಡ್ಡದೂರು, ಆಲ್ದೂರು/ ಕೆ.ವೆಂಕಟೇಶ ಮೂರ್ತಿ, ಬೆಂಗಳೂರು

### ನಕ್ಕಿದ್ದೇ ನಕ್ಕಿದ್ದು!

ನಗೆಹೊನಲು ಓದಿ ನಮ್ಮ ಮನೆಮಂದಿಯೆಲ್ಲಾ ನಕ್ಕಿದ್ದೇ ನಕ್ಕಿದ್ದು. ಹಲವು ವ್ಯಂಗ್ಯ ಚಿತ್ರಗಳನ್ನು ಪ್ರಕಟಿಸಿದ್ದೀರಿ. 'ಸುಧಾ'ದಲ್ಲಿ ಹಾಸ್ಯ, ವ್ಯಂಗ್ಯಚಿತ್ರ ಹೆಚ್ಚು ಪ್ರಕಟಿಸಿದರೆ ಸಂತೋಷ.

-ಕಾಳೀಹುಂಡಿ ಶಿವಕುಮಾರ್, ಮೈಸೂರು

### ಕಪಟ ನಾಟಕ

'ಹಳ್ಳಿ ಹೈದ ಪ್ಯಾಟೆಗೆ ಬಂದ' (ರವೀಂದ್ರ ಭಟ್ಟ) ಕಾರ್ಯಕ್ರಮ ರಾಜೇಶನ ಬದುಕನ್ನೇ ತ್ರಿಶಂಕು ಸ್ಥಿತಿಗೆ ನೂಕಿದೆ. ಈ ಕಾರ್ಯಕ್ರಮ ತಮಗೆ ಹೊಸ ದಿಕ್ಕನ್ನು ತೋರಿಸಿತು ಎಂದು ಅದರಲ್ಲಿ ಭಾಗವಹಿಸಿದವರು ಹೇಳಿದ್ದು ಕಪಟ ನಾಟಕ ಎನ್ನುವುದಕ್ಕೆ ಈ ಪ್ರಕರಣವೇ ಸಾಕ್ಷಿ.

-ದೀಪಕ್ ಕಂಬದಕೋಣೆ, ಉಡುಪಿ

### ಒಲ್ಲದ ಗಂಡನಿಗೆ...

'ಸುಖೀಭವ' ಅಂಕಣದಲ್ಲಿ ವಿನೋದ ಛೆಬ್ಬಿಯವರು ಕಾಲ್ಪನಿಕ ಪ್ರಶ್ನೆಗಳನ್ನು ತಾವೇ ಬರೆದುಕೊಂಡು ಉತ್ತರಿಸುತ್ತಾರೆ ಎಂದು ವೈ.ಯಂ. ಚಂದ್ರಶೇಖರ್ ಸಂದೇಹ ವ್ಯಕ್ತಪಡಿಸಿದ್ದಾರೆ. ಪ್ರಶ್ನೆಗಳು ಕಾಲ್ಪನಿಕವಾಗಲಿ, ಓದುಗರ ಪ್ರಶ್ನೆ ಯಾಗಲಿ –ಛೆಬ್ಬಿಯವರ ಉತ್ತರದಿಂದ ಸಮಾಜಕ್ಕೆ ಹಾಗೂ ವ್ಯಕ್ತಿಗತವಾಗಿ ಹಾನಿ ಏನಿಲ್ಲ. ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕಿತಂತೆ ಎನ್ನುವ ಹಾಗಿದೆ?

-ಬಿ.ಎಂ. ಪರಶಿವಮೂರ್ತಿ, ಬೆಂಗಳೂರು

### ವಿಕೃತ ಪತ್ನಿಯರೂ ಇದ್ದಾರೆ

ವಿಕೃತ ಮನಸ್ಸಿನ ಗಂಡಸು ತನ್ನ ಪತ್ನಿಯನ್ನು ಹೇಗೆ ನಡೆಸಿಕೊಳ್ಳಬಹುದು ಎಂಬುದನ್ನು 'ಕ್ರೌರ್ಯ' ಕಥೆಯಲ್ಲಿ ಸಿ.ಎನ್.ಮುಕ್ತಾ ಚೆನ್ನಾಗಿ ನಿರೂಪಿಸಿದ್ದಾರೆ. ಕೆಲವು ಪುರುಷರೂ ಸಹ ವಿಕೃತ ಮನಸ್ಸಿನ ಪತ್ನಿಯರಿಂದ ಅನುಭವಿಸುತ್ತಿರುವುದು ವಾಸ್ತವ.

-ಸುಧಾ ರಾಜ್, ಮೈಸೂರು/ ಪ್ರಭಾ ಎಸ್.ಶ್ಯಾಮಸುಂದರ್, ಬೆಂಗಳೂರು/
ಎಚ್.ಆನಂದಕುಮಾರ್, ಚಿತ್ರದುರ್ಗ

### ಶಿಕ್ಷಕರ ಮನೋಭಾವ

ಜುಲೈ 26ರ ಸಂಚಿಕೆಯಲ್ಲಿ ಪರಮೇಶ್ವರಯ್ಯ ಸೊಪ್ಪಿಮಠ ಬರೆದಂತೆ 'ಶಿಕ್ಷಕರ ಕೌಶಲಗಳು ಮೊನಚಾಗಬೇಕು', ನಿಜ. ಆದರೆ ಇದಕ್ಕೆಲ್ಲ ಸಮಯವೆಲ್ಲಿ ಎಂದು ಹೇಳುವವರೇ ಹೆಚ್ಚು. ಶಿಕ್ಷಕರ ಮನೋಭಾವ ಬದಲಾಗಬೇಕು.

-ಪುಷ್ಪಾ ಶ್ರೀರಾಮರಾಜು, ಬೆಂಗಳೂರು

---




### ಒಂದು ಬಾಲ್‌ಗೆ ಹತ್ತು ರನ್ನು!

ರಜನೀಕಾಂತ್ 20-ಟ್ವೆಂಟಿ ಕ್ರಿಕೆಟ್ ಆಡ್ತಿದ್ರಾರೆ. ಇನ್ನು ಒಂದು ಬಾಲ್ ಇರುತ್ತೆ, ಆದರೆ ಹತ್ತು ರನ್ನು ಪಡೆಯಬೇಕಿರುತ್ತೆ. ಆದ್ರೂ ಅವರು ಗೆಲ್ತಾರೆ. ಹೇಗಂತೀರಾ...?

ಕಡೆಯ ಬಾಲನ್ನು ರಜನೀಕಾಂತ್ ಹೊಡೆದಾಗ ಬಾಲ್ ಎರಡು ತುಂಡಾಗಿ ಒಂದು ಪೀಸ್ ಸಿಕ್ಸರ್, ಮತ್ತೊಂದು ಪೀಸ್ ಬೌಂಡರಿಗೆ ಹೋಗುತ್ತೆ.

★★★

'ಪ್ರಿಯಾ, ಮುಂದಿನ ವಾರವೇ ನನ್ನ ಹುಟ್ಟುಹಬ್ಬ'

'ಹೌದಲ್ವಾ ಚಿನ್ನಾ. ನಿಂಗೇನು ಬೇಕೋ ಕೇಳು'

'ಒಂದು ರಿಂಗ್ ಕೊಡ್ತಿಯಾ?'

'ಓ ಅಷ್ಟೇ ತಾನೆ. ಲ್ಯಾಂಡ್ ಲೈನಿಗೋ ಇಲ್ಲ ಮೊಬೈಲ್ಗೋ!'

(ಸಂಗ್ರಹ) ಕೆ.ಪಿ.ಸತ್ಯನಾರಾಯಣ



ಆತ: ನಿಮ್ಮ ಮಗನೊಬ್ಬನಿಗೆ ಹುಚ್ಚುನಾಯಿ ಕಡಿದಿತ್ತಲ್ಲ, ಅವನು ಈಗ ಹೇಗಿದ್ದಾನೆ?

ಈತ: ಅವನೀಗ ಕನ್ನಡ ಚಿತ್ರರಂಗದ ನಂ1. ನೃತ್ಯ ನಿರ್ದೇಶಕನಾಗಿದ್ದಾನೆ.

★★★

ನಾಲ್ವರು ಹುಡುಗಿಯರು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದರು. ಟಿಕೆಟ್ ತಪಾಸಣೆ ಮಾಡಿದ ಅಧಿಕಾರಿ ಚೂಡಿದಾರ್ ಧರಿಸಿದ ಹುಡುಗಿಗೆ ನೂರು ರೂಪಾಯಿ, ಸ್ಕರ್ಟ್ ಹಾಕಿದ ಹುಡುಗಿಗೆ ಐವತ್ತು ರೂಪಾಯಿ, ಮಿನಿ ಸ್ಕರ್ಟ್ ಹಾಕಿದ ಹುಡುಗಿಗೆ ಇಪ್ಪತ್ತೈದು ರೂಪಾಯಿ ದಂಡ ಹಾಕಿದರು. ಇನ್ನೊಬ್ಬ ಹುಡುಗಿಗೆ ಏನೂ ದಂಡ ಹಾಕಲಿಲ್ಲ ಯಾಕೆ?

ಯಾಕಂದ್ರೆ ಅವಳ ಹತ್ರ ಟಿಕೆಟ್ ಇತ್ತು!

★★★



ಆತ: ಈ ಒಣಗಿದ ಕೆರೆಗೆ ಟ್ಯಾಂಕರ್‌ನಲ್ಲಿ ನೀರು ತಂದು ತುಂಬುತ್ತಿದ್ದೀರಲ್ಲ?

ಈತ: ಹೌದು.. ನಮ್ಮ ಶಾಸಕರು ತುಂಬಿದ ಕೆರೆಗೆ ಬಾಗಿನ ಸಮರ್ಪಿಸಬೇಕೆಂದು ಒಂದೇ ಸಮನೆ ಹಠ ಮಾಡುತ್ತಿದ್ದಾರೆ.

(ಸಂಗ್ರಹ) ವಿಜಯ್ ಕುಮಾರ್